# ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ -591156**

**(ನ್ಯಾಕ್ ಮಾನ್ಯತೆ ಬಿ+ ಗ್ರೇಡ್ -2021) ಪಿಎಂ-ಉಷಾ (ಮೇರು)**

**(ಹಿಂದಿನ ಪದನಾಮ – 'ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ')**

# KITTURU RANI CHANNAMMA UNIVERSITY

**Vidyasangama, National Highway – 04, Bhootaramanahatti, Belagavi – 591156**

**(NAAC Accredited with B+ Grade – 2021) PM-UShA (MERU)**

*(Formerly known as 'Rani Channamma University, Belagavi')*

**Website:** www.rcub.ac.in
**E-mail:**academic@rcub.ac.in

**ಕುಲಸಚಿವರ ಕಾರ್ಯಾಲಯ**
**Office of the Registrar**

**Phone No.: 0831-2565241**
**0831-2565257/8**


---

**ಕ್ರ.ಸಂ.:** ಕಿರಾಚವಿ/ಬೆಳಗಾವಿ/ಕುಸಕಾ/ವಿಮವಿ/ಸ್ನಾತಕೋತ್ತರ/2026-27/2265 **ದಿನಾಂಕ:** 27-07-2026

## <u>ಸುತ್ತೋಲೆ</u>

**ವಿಷಯ:** 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶ ಪ್ರಕ್ರಿಯೆಗೆ ಹಾಜರಾಗುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17-06-2026.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2026-27 ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗೆ UUCMS ಮೂಲಕ ಅರ್ಜಿಯನ್ನು ಸಲ್ಲಿಸಿ, ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸ್ನಾತಕೋತ್ತರ ಪ್ರವೇಶಾತಿ ಪ್ರಕ್ರಿಯೆಗೆ ಸಂಬಂಧಿಸಿದ ವೇಳಾಪಟ್ಟಿಯನ್ನು ವಿಶ್ವವಿದ್ಯಾಲಯದ ಜಾಲತಾಣ www.rcub.ac.in ದಲ್ಲಿ ಪ್ರಕಟಿಸಲಾಗಿದೆ. ಸದರಿ ವೇಳಾಪಟ್ಟಿಯಂತೆ, ದಿನಾಂಕ: 01-08-2026 ರಿಂದ ಪ್ರಥಮ ಹಂತದ ಪ್ರವೇಶಾತಿ ಪ್ರಕ್ರಿಯೆಯು ವಿಶ್ವವಿದ್ಯಾಲಯದ ಮುಖ್ಯ ಆವರಣದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಜರುಗಿಸಲಾಗುವುದು. ಆದ್ದರಿಂದ, ಈ ಕೆಳಗೆ ನೀಡಲಾದ ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದ ಮಾರ್ಗಸೂಚಿಗಳು / ಸೂಚನೆಗಳನ್ನು ಓದಿ ಮನದಟ್ಟು ಮಾಡಿಕೊಂಡು ಅವಶ್ಯಕವಿರುವ ದಾಖಲೆಗಳೊಂದಿಗೆ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಈ ಮೂಲಕ ತಿಳಿಸಲಾಗಿದೆ.

- **<u>ಮಾರ್ಗಸೂಚಿಗಳು / ಸೂಚನೆಗಳು;</u>**

**1.** ಪ್ರವೇಶಾತಿಯಲ್ಲಿ ಸೀಟುಗಳ ಹಂಚಿಕೆಯನ್ನು ಸರಕಾರದ ಮೀಸಲಾತಿಯನ್ವಯ ನಿಯಮಾನುಸಾರವಾಗಿ ಮಾಡಲಾಗುವುದು.

**2.** ವಿಶ್ವವಿದ್ಯಾಲಯದ ಜಾಲತಾಣ www.rcub.ac.in ದಲ್ಲಿ ವಿಭಾಗವಾರು ಪ್ರಕಟಿಸಲಾದ ಪ್ರವೇಶ ಪ್ರಕ್ರಿಯೆ ವೇಳಾಪಟ್ಟಿ ಹಾಗೂ ಅಂತಿಮ ಜೇಷ್ಠತಾ ಪಟ್ಟಿ (Final Merit list) ಯನ್ನು ವೀಕ್ಷಿಸುವುದು. ತಮ್ಮ ಕ್ರಮ ಸಂಖ್ಯೆ ಮತ್ತು ಪ್ರವೇಶ ಪ್ರಕ್ರಿಯೆ ದಿನಾಂಕ ಮತ್ತು ಸಮಯವನ್ನು ಗಮನದಲ್ಲಿ ಇಟ್ಟುಕೊಳ್ಳುವುದು.

**3.** ಪ್ರವೇಶಾತಿ ಪ್ರಕ್ರಿಯೆಯಲ್ಲಿ ಕೇವಲ ವಿದ್ಯಾರ್ಥಿಗಳು ಮಾತ್ರ ಪಾಲ್ಗೊಳ್ಳಲು ಅವಕಾಶವಿರುತ್ತದೆ. ಮುಂಜಾನೆ ಸಮಯದ ವಿದ್ಯಾರ್ಥಿಗಳು ಬೆಳಿಗ್ಗೆ 09.30 ಗಂಟೆಯೊಳಗೆ ಮತ್ತು ಮಧ್ಯಾಹ್ನ ಸಮಯದ ವಿದ್ಯಾರ್ಥಿಗಳು ಮಧ್ಯಾಹ್ನ 01.30 ಗಂಟೆಯೊಳಗೆ ತಮ್ಮ ವಿಭಾಗಕ್ಕೆ ನಿಗದಿಪಡಿಸಿದ ಸ್ಥಳದಲ್ಲಿ ಹಾಜರಿರಬೇಕು.

**4.** ಅಂತಿಮ ಜೇಷ್ಠತಾ ಪಟ್ಟಿ (Final Merit list) ಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಎಲ್ಲ ಮೂಲ (Original) ಅಂಕಪಟ್ಟಿಗಳು, ದಾಖಲೆಗಳು ಮತ್ತು ದೃಢೀಕರಿಸಿದ ಪ್ರತಿಗಳೊಂದಿಗೆ (One Set Xerox) (ಅಂಕಪಟ್ಟಿಗಳು, ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು ಹಾಗೂ ಮೀಸಲಾತಿ ಕೋಟಾದಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳು ಸಕ್ಷಮ

ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರಗಳು). ಸ್ನಾತಕೋತ್ತರ ವಿಭಾಗವಾರು ಪ್ರವೇಶಾತಿ ಪ್ರಕ್ರಿಯೆ ವೇಳಾಪಟ್ಟಿಯಲ್ಲಿ ನಿಗದಿಪಡಿಸಲಾದ (PG Department wise Counselling Time Table) ದಿನಾಂಕ, ಸ್ಥಳ ಹಾಗೂ ಸಮಯಕ್ಕೆ ಹಾಜರಿರಲು ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ನಿಗದಿತ ಸಮಯದೊಳಗೆ ಹಾಜರಾಗದೇ ಇದ್ದಲ್ಲಿ ಮುಂದಿನ ಆಗು-ಹೋಗುಗಳಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳೇ ನೇರ ಹೊಣೆಗಾರರಾಗುತ್ತಾರೆ.

**5.** ಒಂದು ವೇಳೆ ಸ್ನಾತಕ ಪದವಿ ಅಂಕಪಟ್ಟಿಗಳು ಮುದ್ರಿತಗೊಂಡಿರದೇ ಇದ್ದಲ್ಲಿ, ಸಂಬಂಧಿಸಿದ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಿಂದ ದೃಢೀಕರಿಸಿದ ಫಲಿತಾಂಶ ಪತ್ರವನ್ನು ಅಥವಾ ಜಾಲತಾಣದಲ್ಲಿ ಪ್ರಕಟಿಸಲಾದ ಅಂಕಪಟ್ಟಿಗಳನ್ನು (Result Sheets / Internet Marks Card copy with Self Attested) ಸ್ವಯಂ ದೃಢೀಕರಿಸಿ ಸಲ್ಲಿಸುವುದು ಹಾಗೂ ಪ್ರವೇಶಾತಿ ಪಡೆದ 06 ತಿಂಗಳದ ಒಳಗೆ ಅಂಕಪಟ್ಟಿಗಳನ್ನು ಸಂಬಂಧಿಸಿದ ಸ್ನಾತಕೋತ್ತರ ವಿಭಾಗಗಳಿಗೆ ಸಲ್ಲಿಸುವುದು.

**6. ಪ್ರವೇಶ ಶುಲ್ಕಗಳು:**

I. ವಿಷಯವಾರು ಪ್ರವೇಶ ಶುಲ್ಕ ಮತ್ತು ಅರ್ಹತಾ ಪ್ರಮಾಣ ಪತ್ರದ ಶುಲ್ಕಗಳ ವಿವರಗಳಿಗಾಗಿ ಸ್ನಾತಕೋತ್ತರ ವಿಭಾಗಗಳ ಸೂಚನಾ ಫಲಕ (Notice Board) ಅಥವಾ ವಿಚಾರಣಾ ಸ್ಥಳ "HELP DESK" ದಲ್ಲಿರುವ ಸಿಬ್ಬಂದಿಯಿಂದ ಅಥವಾ ವಿಶ್ವವಿದಾಲಯದ ಜಾಲತಾಣ : www.rcub.ac.in ನಿಂದ ಪಡೆಯಬಹುದಾಗಿದೆ.

II. **ವಿಶ್ವವಿದ್ಯಾಲಯ ಕೋಟಾದಡಿಯಲ್ಲಿ** ಪ್ರವೇಶಾತಿಗೆ ಆಯ್ಕೆಯಾದ ವಿದ್ಯಾರ್ಥಿಗಳು ಪ್ರವೇಶ ಸಮಯದಲ್ಲಿ ನಿಗದಿತ ಪ್ರವೇಶಾತಿ ಶುಲ್ಕವನ್ನು ಆನ್ ಲೈನ್ (GATEWAY) ಮೂಲಕ ಈ ಕೆಳಗೆ ವಿವರಿಸಲಾದ ಹಂತವನ್ನು ಅನುಸರಿಸಿ ಪ್ರವೇಶ ಶುಲ್ಕವನ್ನು ಪಾವತಿಸುವುದು. ಆನ್‌ಲೈನ್ (GATEWAY) ಮೂಲಕ ಪಾವತಿಸಿದ ಪ್ರವೇಶ ಶುಲ್ಕದ ಮುದ್ರಿತ ಪ್ರತಿಯನ್ನು ಸಂಬಂಧಿಸಿದ ಸ್ನಾತಕೋತ್ತರ ವಿಭಾಗಕ್ಕೆ ಸಲ್ಲಿಸುವುದು.

   a. ವಿಶ್ವವಿದ್ಯಾಲಯದ ವೆಬ್‌ಸೈಟ್: www.rcub.ac.in ನ ಆನ್‌ಲೈನ್ ಶುಲ್ಕ - ಪ್ರವೇಶ ವಿಭಾಗ ಶುಲ್ಕ ಪಾವತಿ – Purpose of the Payment-201– **Admission or Registration Fees.**

   b. ವಿಶ್ವವಿದ್ಯಾಲಯದ ವೆಬ್‌ಸೈಟ್: www.rcub.ac.in ನ ಆನ್‌ಲೈನ್ ಶುಲ್ಕ - ಪ್ರವೇಶ ವಿಭಾಗ ಶುಲ್ಕ ಪಾವತಿ – Purpose of the Payment-302 –**Eligibility Certificate Fees** ಅಥವಾ

   c. ನೇರವಾಗಿ ಈ ಕೆಳಗಿನ ಆನ್ ಲೈನ್ ಲಿಂಕ್ ಮೂಲಕ ಶುಲ್ಕವನ್ನು ಪಾವತಿಸಬಹುದಾಗಿದೆ: https://payments.billdesk.com/bdcollect/bd/ranichannammauniversity/16835

III. ಮುಂದುವರೆದು, ತಾವು ಪ್ರವೇಶಾತಿ ಪಡೆದ ವಿಭಾಗದಿಂದ ಪ್ರವೇಶಾತಿ ಖಚಿತಪಡಿಸಿಕೊಂಡ ನಂತರವೇ ವಿಶ್ವವಿದ್ಯಾಲಯದಿಂದ ತೆರಳುವುದು. ಹಾಗೂ ಪ್ರವೇಶಾತಿ ಪಡೆದ ಎರಡು ದಿನದೊಳಗೆ ಅಭ್ಯರ್ಥಿಗಳು ತಾವು ಆಯ್ಕೆ ಮಾಡಿಕೊಂಡ ವಿಶ್ವವಿದ್ಯಾಲಯದ ವಿಭಾಗ ಅಥವಾ ಮಹಾವಿದ್ಯಾಲಯಕ್ಕೆ ಹಾಜರಾಗಿ ವರದಿಯನ್ನು ಒಪ್ಪಿಸುವುದು. ತಪ್ಪಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ವಿದ್ಯಾರ್ಥಿಗಳೇ ನೇರ ಹೊಣೆಗಾರರಾಗುತ್ತಾರೆ.

IV. **ಆಡಳಿತ ಮಂಡಳಿ ಕೋಟಾದಡಿಯಲ್ಲಿ** ಪ್ರವೇಶಾತಿ ಪಡೆಯಬಯಸುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಪ್ರವೇಶ ಶುಲ್ಕದೊಂದಿಗೆ ಅರ್ಜಿ ಶುಲ್ಕವನ್ನು (ಕರ್ನಾಟಕ ವಿದ್ಯಾರ್ಥಿಗಳಿಗೆ ರೂ.250/- ಬೇರೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ರೂ.500/-) ಒಟ್ಟುಗೂಡಿಸಿ ಈ ಕೆಳಗೆ ವಿವರಿಸಲಾದ ಹಂತವನ್ನು ಅನುಸರಿಸಿ ಪ್ರವೇಶ ಶುಲ್ಕವನ್ನು ನಿಗದಿಪಡಿಸಿದ ದಿನಾಂಕದೊಳಗೆ ಪಾವತಿಸುವುದು ಹಾಗೂ ಆನ್‌ಲೈನ್ (GATEWAY) ಮೂಲಕ ಪಾವತಿಸಿದ ಪ್ರವೇಶ ಶುಲ್ಕದ ಮುದ್ರಿತ ಪ್ರತಿಯನ್ನು ಮಹಾವಿದ್ಯಾಲಯಕ್ಕೆ ಸಲ್ಲಿಸುವುದು.

   d. ವಿಶ್ವವಿದ್ಯಾಲಯದ ವೆಬ್‌ಸೈಟ್: www.rcub.ac.in ನ ಆನ್‌ಲೈನ್ ಶುಲ್ಕ - ಪ್ರವೇಶ ವಿಭಾಗ ಶುಲ್ಕ ಪಾವತಿ – Purpose of the Payment-201– **Admission or Registration Fees.**

   e. ವಿಶ್ವವಿದ್ಯಾಲಯದ ವೆಬ್‌ಸೈಟ್: www.rcub.ac.in ನ ಆನ್‌ಲೈನ್ ಶುಲ್ಕ - ಪ್ರವೇಶ ವಿಭಾಗ ಶುಲ್ಕ ಪಾವತಿ – Purpose of the Payment-302 –**Eligibility Certificate Fees** ಅಥವಾ

f. ನೇರವಾಗಿ ಈ ಕೆಳಗಿನ ಆನ್ ಲೈನ್ ಲಿಂಕ್ ಮೂಲಕ ಶುಲ್ಕವನ್ನು ಪಾವತಿಸಬಹುದಾಗಿದೆ: https://payments.billdesk.com/bdcollect/bd/ranichannammauniversity/16835

7. **ವಿಶ್ವವಿದ್ಯಾಲಯ ಕೋಟಾದಡಿಯಲ್ಲಿ ಮಹಾವಿದ್ಯಾಲಯದ ಆಯ್ಕೆ:** ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಪ್ರವೇಶಾತಿ ಸಮಯದಲ್ಲಿ ಸ್ನಾತಕೋತ್ತರ ಮಹಾವಿದ್ಯಾಲಯವನ್ನು ಪ್ರವೇಶಾತಿಗಾಗಿ ಆಯ್ಕೆ ಮಾಡಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಕೇವಲ ವಿಶ್ವವಿದ್ಯಾಲಯದ ಶುಲ್ಕವನ್ನು ಮಾತ್ರ ಪಾವತಿಸುವುದು ಹಾಗೂ ಉಳಿದ ಮಹಾವಿದ್ಯಾಲಯದ ಪ್ರವೇಶ ಶುಲ್ಕವನ್ನು ಮಹಾವಿದ್ಯಾಲಯದಲ್ಲಿ ಪಾವತಿಸಿ ಪ್ರವೇಶಾತಿ ಪಡೆಯುವುದು. ಒಂದು ವೇಳೆ ಮಹಾವಿದ್ಯಾಲಯವನ್ನು ಆಯ್ಕೆ ಮಾಡಿ, ವಿಶ್ವವಿದ್ಯಾಲಯದಲ್ಲಿ ಪ್ರವೇಶ ಶುಲ್ಕವನ್ನು ಪಾವತಿಸಿದಂತಹ ವಿದ್ಯಾರ್ಥಿಗಳು ಆಯ್ಕೆ ಮಾಡಿದ ಮಹಾವಿದ್ಯಾಲಯದಲ್ಲಿ ಪ್ರವೇಶಾತಿ ಪಡೆಯದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಪಾವತಿಸಿದ ಪ್ರವೇಶ ಶುಲ್ಕವನ್ನು ಮರುಭರಣ (No-Refund) ಮಾಡಲಾಗುವುದಿಲ್ಲ.
8. **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ವಿನಾಯಿತಿ:** ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಕಿಂತ ಒಳಗಿರುವ ಮತ್ತು ವಿದ್ಯಾರ್ಥಿ ವೇತನಕ್ಕೆ (Freeship Card) ಅರ್ಹತೆ ಪಡೆದಿರುವ ಹಾಗೂ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕೋಟಾದಡಿಯಲ್ಲಿ ಮಾತ್ರ, ವಿವಿಧ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪ್ರವೇಶ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ. ಶುಲ್ಕ ವಿನಾಯಿತಿ ಪಡೆದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ (https://ssp.postmatric.karnataka.gov.in/) ಕಡ್ಡಾಯವಾಗಿ ಅರ್ಜಿಯನ್ನು ಸಲ್ಲಿಸಿ, ಒಂದು ಮುದ್ರಿತ ಪ್ರತಿಯನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಿಗೆ/ಮಹಾವಿದ್ಯಾಲಯಗಳಿಗೆ ಸಲ್ಲಿಸುವುದು ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿ ವೇತನ ಮಂಜೂರಾದ ನಂತರ ಸ್ನಾತಕೋತ್ತರ ವಿಭಾಗಗಳಿಗೆ / ಮಹಾವಿದ್ಯಾಲಯಗಳಿಗೆ ಮರುಪಾವತಿ ಮಾಡುವುದು. ಒಂದು ವೇಳೆ ಪ್ರವೇಶ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಕಾರಣಾಂತರಗಳಿಂದ ಸ್ನಾತಕೋತ್ತರ ಪದವಿಯನ್ನು ಮಧ್ಯದಲ್ಲಿಯೇ ಮೊಟಕುಗೊಳಿಸ ಬಯಸಿದ್ದಲ್ಲಿ ವಿನಾಯಿತಿ ಪಡೆದ ಪ್ರವೇಶ ಶುಲ್ಕಗಳನ್ನು ಸ್ನಾತಕೋತ್ತರ ವಿಭಾಗಗಳಿಗೆ/ಮಹಾವಿದ್ಯಾಲಯಗಳಿಗೆ ಪಾವತಿಸುವುದು..
9. **ಒಳಮೀಸಲಾತಿ ಪ್ರಮಾಣ ಪತ್ರ:** ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಒಳಮೀಸಲಾತಿ ಪ್ರಮಾಣ ಪತ್ರವನ್ನು ಪ್ರವೇಶಾತಿ ಸಮಯದಲ್ಲಿ ಸಲ್ಲಿಸುವುದು.
10. **ವಿದ್ಯಾರ್ಥಿಗಳ ಕನಿಷ್ಠ ಪ್ರವೇಶಾತಿ ಸಂಖ್ಯೆ:** ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯದ ಯಾವುದೇ ವಿಭಾಗ/ಕೋರ್ಸಿನಲ್ಲಿ ಕನಿಷ್ಠ 15 ವಿದ್ಯಾರ್ಥಿಗಳಿಗಿಂತ ಕಡಿಮೆ ಪ್ರವೇಶ ಪಡೆದಿದ್ದಲ್ಲಿ ಅಥವಾ ನೀಡಿದಲ್ಲಿ, ಸದರಿ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಕ್ಕೆ ಅಥವಾ ಬೇರೆ ಸಂಯೋಜಿತ ಮಹಾವಿದ್ಯಾಲಯಕ್ಕೆ ವರ್ಗಾಯಿಸಲಾಗುವುದು.
11. **ಹಾಜರಾತಿ:** ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಯು ಪ್ರತಿ ವಿಷಯದಲ್ಲಿ ಶೇಕಡಾ 75% ರಷ್ಟು ಹಾಜರಾತಿಯನ್ನು ಪೂರೈಸುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ ಕಡಿಮೆ ಹಾಜರಾತಿಯನ್ನು ಹೊಂದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಇರುವುದಿಲ್ಲ.
12. **ಹೆಚ್ಚುವರಿ ಶುಲ್ಕದ ಕೋಟಾ (Enhanced Quota):** ಹೆಚ್ಚುವರಿ ಶುಲ್ಕದ ಕೋಟಾಡಿಯಲ್ಲಿ (Enhanced Quota) ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ರದ್ದುಪಡಿಸಲು ಮತ್ತು ವರ್ಗಾಯಿಸಲು ಹಾಗೂ ಪ್ರವೇಶ ಶುಲ್ಕ ಮರುಭರಣಕ್ಕೆ ಅವಕಾಶವಿರುವುದಿಲ್ಲ.
13. **ಸ್ನಾತಕೋತ್ತರ ಪದವಿ ಮಹಾವಿದ್ಯಾಲಯಗಳು:** ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿನ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ಕೋರ್ಸುಗಳ ವಿವರಗಳನ್ನು ವಿಶ್ವವಿದ್ಯಾಲಯದ ಜಾಲತಾಣ **www.rcub.ac.in** ದಲ್ಲಿ ಪಡೆಯಬಹುದಾಗಿದೆ.

14. **ವಿಜಯಪುರದ ಸ್ನಾತಕೋತ್ತರ ಕೇಂದ್ರ,** ವಿಜಯಪುರದ ಸ್ನಾತಕೋತ್ತರ ಕೇಂದ್ರದಲ್ಲಿನ ಕೋರ್ಸುಗಳ ಅಧ್ಯಯನಕ್ಕೆ ಆಸಕ್ತವಿರುವ ವಿದ್ಯಾರ್ಥಿಗಳು ಸದರಿ ಕೇಂದ್ರದಲ್ಲಿಯೇ, ಆನಲೈನ್ (UUCMS) ಮೂಲಕ ಅರ್ಜಿ ಸಲ್ಲಿಸಿದ ಪ್ರತಿ, ಅರ್ಜಿ ಶುಲ್ಕದ ಪ್ರತಿ ಹಾಗೂ ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು *"ಸಂಯೋಜಕರು, ಸ್ನಾತಕೋತ್ತರ ಕೇಂದ್ರ, ತೊರವಿ, ವಿಜಯಪುರ"* ಕಛೇರಿಯಲ್ಲಿಯೇ ಸಲ್ಲಿಸುವುದು. ಸದರಿ ವಿದ್ಯಾರ್ಥಿಗಳಿಗೆ ವಿಜಯಪುರದ ಸ್ನಾತಕೋತ್ತರ ಕೇಂದ್ರದಲ್ಲಿಯೇ ಪ್ರವೇಶ ಪ್ರಕ್ರಿಯೆಯನ್ನು ಕೈಗೊಂಡು ಪ್ರವೇಶವನ್ನು ನೀಡಲಾಗುವುದು.
15. **ಎಂ.ಪಿ.ಇಡಿ - (M.P.Ed):** ದೈಹಿಕ ಶಿಕ್ಷಣಶಾಸ್ತ್ರ ಕೋರ್ಸಗೆ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಬಿ.ಪಿ.ಎಡ್ ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ವಿಶ್ವವಿದ್ಯಾಲಯದ ಕೋಟಾದಡಿಯಲ್ಲಿ (KRCU Quota) ಲಭ್ಯವಿರುವ ಸೀಟುಗಳನ್ನು ಹಂಚಿಕೆ ಮಾಡಲಾಗುವುದು ಹಾಗೂ "ವಿಶ್ವವಿದ್ಯಾಲಯ ಅನುದಾನ ಆಯೋಗ" (UGC) ದಿಂದ ಮಾನ್ಯತೆ ಪಡೆದ ಕರ್ನಾಟಕ ಮತ್ತು ಕರ್ನಾಟಕೇತರ ವಿಶ್ವವಿದ್ಯಾಲಯಗಳಲ್ಲಿ ಬಿ.ಪಿ.ಎಡ್ ಪದವಿ ಪೂರ್ಣಗೊಳಿಸಿದ ಅರ್ಹ ವಿದ್ಯಾರ್ಥಿಗಳು ವಿದ್ಯಾಮಂಡಳ ವಿಭಾಗದಿಂದ ಅರ್ಹತಾ ಪ್ರಮಾಣ ಪತ್ರ ಪಡೆದುಕೊಂಡು, ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸೀಟುಗಳಿಗೆ ಆಡಳಿತ ಮಂಡಳಿ ಕೋಟಾದಡಿಯಲ್ಲಿ (Management Quota) ಪ್ರವೇಶಾತಿಯನ್ನು ಪಡೆಯಬಹುದಾಗಿದೆ.
16. **ಬಾಕಿ ಲಭ್ಯವಿರುವ ಸೀಟುಗಳು:** ಒಂದು ವೇಳೆ ಪ್ರವೇಶಾತಿ ಸಮಯದಲ್ಲಿ ಪ್ರವೇಶಾತಿ ರದ್ದುಪಡಿಸಿಕೊಂಡಿರುವ ಅಥವಾ ಬಾಕಿ ಲಭ್ಯವಿರುವ ಸೀಟುಗಳನ್ನು ಹಂತ ಹಂತವಾಗಿ ವಿಶ್ವವಿದ್ಯಾಲಯದ ಜಾಲತಾಣ www.rcub.ac.in ದಲ್ಲಿ ಪ್ರಕಟಣೆ ನೀಡುವುದರ ಮೂಲಕ ಹಂಚಿಕೆ ಮಾಡಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯವು ನಿಯಮಿತವಾಗಿ ವಿಶ್ವವಿದ್ಯಾಲಯದ ಜಾಲತಾಣ www.rcub.ac.in ವನ್ನು ವೀಕ್ಷಿಸುವುದು.
17. **ಅರ್ಹತಾ ಪ್ರಮಾಣ ಪತ್ರ ಪಡೆಯಲು ಸೂಚನೆಗಳು:**

    I. ಕರ್ನಾಟಕ ಮೂಲದ ಹಾಗೂ ಕರ್ನಾಟಕೇತರ ರಾಜ್ಯಗಳಲ್ಲಿರುವ "ವಿಶ್ವವಿದ್ಯಾಲಯ ಅನುದಾನ (UGC) ಆಯೋಗ"ದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ ಸ್ನಾತಕ ಪದವಿ ಪಡೆದ ಅರ್ಹ ವಿದ್ಯಾರ್ಥಿಗಳು (ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಹಾಗೂ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಪದವಿ ಪಡೆದ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಸ್ನಾತಕೋತ್ತರ ಪ್ರವೇಶ ಪಡೆಯುವುದಕ್ಕಿಂತ ಮುಂಚೆ ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ (Eligibility Certificate) ಪಡೆಯುವುದು ಕಡ್ಡಾಯವಾಗಿರುತ್ತದೆ.

    II. ಅರ್ಹತಾ ಪ್ರಮಾಣ ಪತ್ರ ಪಡೆಯಲು ವಿದ್ಯಾರ್ಥಿಗಳು 10 ಮತ್ತು 12ನೇ ತರಗತಿಯ ಹಾಗೂ ಸ್ನಾತಕ ಪದವಿಯ ಎಲ್ಲ ಮೂಲ (Original) ಅಂಕಪಟ್ಟಿಗಳು ಮತ್ತು ದೃಢೀಕರಿಸಿದ ಪ್ರತಿಗಳೊಂದಿಗೆ (One Set Xerox) ಹಾಗೂ ವಿಶ್ವವಿದ್ಯಾಲಯವು ಈ ಕೆಳಗೆ ಸೂಚಿಸಿರುವ ಅವಶ್ಯಕ ದಾಖಲೆ ಹಾಗೂ ಶುಲ್ಕಗಳೊಂದಿಗೆ ಸಂಬಂಧಿಸಿದ ವಿದ್ಯಾರ್ಥಿಯು ಅರ್ಹತಾ ಪ್ರಮಾಣ ಪತ್ರಕ್ಕೆ ಅರ್ಜಿಯನ್ನು ಸಲ್ಲಿಸುವುದು.

    III. ಒಂದು ವೇಳೆ ಸ್ನಾತಕ ಪದವಿ ಅಂಕಪಟ್ಟಿಗಳು ಮುದ್ರಿತಗೊಂಡಿರದೇ ಇದ್ದಲ್ಲಿ, ಸಂಬಂಧಿಸಿದ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಿಂದ ದೃಢೀಕರಿಸಿದ ಫಲಿತಾಂಶ ಪತ್ರವನ್ನು ಅಥವಾ ಜಾಲತಾಣದಲ್ಲಿ ಪ್ರಕಟಿಸಲಾದ ಅಂಕಪಟ್ಟಿಗಳನ್ನು (Result Sheets / Internet Marks Card copy with Self Attested) ಸ್ವಯಂ ದೃಢೀಕರಿಸಿ ಸಲ್ಲಿಸುವುದು.

    IV. ವಿದ್ಯಾರ್ಥಿಗಳು ಸಲ್ಲಿಸಿದ ಸ್ನಾತಕ ಪದವಿ ಅಂಕಪಟ್ಟಿಗಳು ವಿಶ್ವವಿದ್ಯಾಲಯಕ್ಕೆ ಸಂಶಯಾಸ್ಪದ ಎಂದು ಕಂಡುಬಂದಲ್ಲಿ, ಅಂತಹ ಅಂಕಪಟ್ಟಿಗಳ ನೈಜತೆ ಪರಿಶೀಲನೆಗಾಗಿ ಸಂಬಂಧಪಟ್ಟ ವಿಶ್ವವಿದ್ಯಾಲಯಗಳಿಗೆ ಕಳುಹಿಸಿಕೊಡಲಾಗುವುದು ಹಾಗೂ ಸದರಿ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ನೈಜತೆ ಪರಿಶೀಲನೆ ಶುಲ್ಕವನ್ನು

ವಿದ್ಯಾರ್ಥಿಯೇ ಭರಿಸುವುದು. ಸಂಬಂಧಿಸಿದ ವಿಶ್ವವಿದ್ಯಾಲಯದಿಂದ ನಿಗದಿತ ಸಮಯದೊಳಗೆ ನೈಜತೆ ಧೃಡೀಕರಣ ಪತ್ರ ಬಂದಲ್ಲಿ ಮಾತ್ರ ಅರ್ಹತಾ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.

V. ಬೇರೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅರ್ಹತಾ ಪ್ರಮಾಣ ಪತ್ರವನ್ನು ಪಡೆಯದೇ ಪ್ರವೇಶಾತಿಯನ್ನು ಪಡೆದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳ ಮೇಲೆ ವಿಶ್ವವಿದ್ಯಾಲಯದ ನಿಯಮಾವಳಿಯನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

VI. ಅಪೂರ್ಣ ಮಾಹಿತಿ ಹಾಗೂ ದಾಖಲೆಗಳಿಗೆ ಅರ್ಹತಾ ಪ್ರಮಾಣ ಪತ್ರವನ್ನು ವಿತರಿಸಲಾಗುವುದಿಲ್ಲ.

VII. **ಅರ್ಹತಾ ಪ್ರಮಾಣ ಪತ್ರ, ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಬೇಕಾದ ದಾಖಲೆಗಳು;**

- ✓ ಒಂದು ಗುರುತಿನ ಚೀಟಿ ಗಾತ್ರದ ಭಾವಚಿತ್ರ.
- ✓ ಆಧಾರ ಗುರುತಿನ ಚೀಟಿಯ ಪ್ರತಿ.
- ✓ 10, 12ನೇ ತರಗತಿಯ ಹಾಗೂ ಸ್ನಾತಕ ಪದವಿಯ ಎಲ್ಲ ಅಂಕಪಟ್ಟಿಗಳ ಧೃಢೀಕರಿಸಿದ ಪ್ರತಿಗಳು.
- ✓ ಸ್ನಾತಕ ಪದವಿ ಪಡೆದು, ಮುಂದಿನ ವ್ಯಾಸಾಂಗ ಪಡೆಯಲು ಎರಡು ಅಥವಾ ಹೆಚ್ಚಿನ ವರ್ಷಗಳ ಅಂತರವಾಗಿದ್ದಲ್ಲಿ (Study Discontinue) ಕಾರಣ ತಿಳಿಸಿರುವ ರೂ. 100/- ಛಾಪಾ ಕಾಗದ (Bond Paper) ಪತ್ರವನ್ನು ಸಲ್ಲಿಸುವುದು.
- ✓ **ಅರ್ಹತಾ ಪ್ರಮಾಣ ಪತ್ರಗಳ ಶುಲ್ಕಗಳ ವಿವರ;**

| ಕ್ರ.ಸಂ | ವಿವರ | ವಿವಿಧ ಸ್ನಾತಕೋತ್ತರ ಕೋರ್ಸಗಳಿಗೆ | ಎಮ್.ಸಿ.ಎ ಕೋರ್ಸ |
|---|---|---|---|
| 01 | ಕರ್ನಾಟಕ ವಿದ್ಯಾರ್ಥಿಗಳು | ರೂ.3,820/- | ರೂ.3,470/- |
| 02 | ಕರ್ನಾಟಕೇತರ ವಿದ್ಯಾರ್ಥಿಗಳು | ರೂ.6,360/- | ರೂ.11,550/- |
| 03 | ಅನಿವಾಸಿ ಭಾರತೀಯರು | ರೂ.12,710/- | ರೂ.17,330/- |
| 04 | ವಿದೇಶಿ ವಿದ್ಯಾರ್ಥಿಗಳು | ರೂ.19,060/- | ರೂ.23,100/- |

**18.** ಪ್ರವೇಶಾತಿ ಪ್ರಕ್ರಿಯೆ ಜರುಗುವ ದಿನದಂದು, ಪ್ರವೇಶ ಪ್ರಕ್ರಿಯೆಗೆ ಸಂಬಂಧಪಟ್ಟ ಅವಶ್ಯಕವಿರುವ ಮಾಹಿತಿಗಾಗಿ ವಿಚಾರಣಾ ಸ್ಥಳ "HELP DESK" ದಲ್ಲಿರುವ ಸಿಬ್ಬಂದಿಯವರನ್ನು ಸಂಪರ್ಕಿಸಿರಿ.

**19.** ಉಪಹಾರ ಹಾಗೂ ಊಟದ ವ್ಯವಸ್ಥೆ ವಿಶ್ವವಿದ್ಯಾಲಯದ ಉಪಹಾರ ಗೃಹ (CANTEN) ಹಾಗೂ ವಸತಿ ನಿಲಯದ ಭೋಜನಾಲಯದಲ್ಲಿ ದೊರೆಯುತ್ತದೆ.

**20.** ವಿಶ್ವವಿದ್ಯಾಲಯದ ಮುಖ್ಯ ಆವರಣದ ಕೆಳಮಹಡಿಯ ಎಡಭಾಗದಲ್ಲಿ ಆರೋಗ್ಯ ಕೇಂದ್ರವಿದೆ.

**21.** ನಿಮ್ಮ ವಾಹನಗಳನ್ನು ತಮಗಾಗಿ ನಿಗದಿ ಪಡಿಸಿರುವ ಸ್ಥಳಗಳಲ್ಲಿ ಮಾತ್ರ ನಿಲ್ಲಿಸುವುದು.

**22.** ವಿಶ್ವವಿದ್ಯಾಲಯ ಆವರಣದ ಕೆಳಮಹಡಿ ಹಾಗೂ ಮೊದಲ ಮಹಡಿಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ.

**23.** ಪ್ರತಿಯೊಂದು ಮಹಡಿಯ ಬಲಭಾಗದಲ್ಲಿ ಮಹಿಳೆಯರಿಗೆ ಹಾಗೂ ಎಡಭಾಗದಲ್ಲಿ ಪುರಷರಿಗೆ ಶೌಚಾಲಯದ ವ್ಯವಸ್ಥೆಯನ್ನು ಮಾಡಲಾಗಿದೆ.

**24.** ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು, ಬೆಳಗಾವಿ ಕೇಂದ್ರ ಬಸ್ ನಿಲ್ದಾಣದಿಂದ 18 ಕಿ.ಮೀ. ದೂರದಲ್ಲಿ NH-04 ಭೂತರಾಮನಹಟ್ಟಿಯಲ್ಲಿದ್ದು ಬೆಳಗಾವಿ ನಗರದಿಂದ ಸಿಟಿ ಬಸ್ ಮತ್ತು ಖಾಸಗಿ ವಾಹನಗಳ ಸೌಲಭ್ಯವಿರುತ್ತದೆ.

**25.** ಪ್ರವೇಶಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶಗಳು ಮತ್ತು ವಿಶ್ವವಿದ್ಯಾಲಯದ ನಿಯಮಾವಳಿಗಳು ಹಾಗೂ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳನ್ನು ಪಾಲಿಸುವುದು ಹಾಗೂ ಪ್ರವೇಶಾತಿಗೆ ಸಂಬಂಧಿಸಿದ ಪ್ರಚಲಿತ ಪ್ರಕಟಣೆಯ ಮಾಹಿತಿಗಾಗಿ ನಿಯಮಿತವಾಗಿ ವಿಶ್ವವಿದ್ಯಾಲಯದ ಜಾಲತಾಣ www.rcub.ac.in ವನ್ನು ವೀಕ್ಷಿಸುವುದು.

**26.** UUCMS ತಂತ್ರಾಂಶದಲ್ಲಿ ಯಾವುದಾದರೂ ತಾಂತ್ರಿಕ ಸಮಸ್ಯೆಗಳಿದ್ದರೆ ಸಹಾಯವಾಣಿ ನಂ: 0831-2565241 / 257 / 258, 9480431000 ಅಥವಾ E-Mail ID uucms@rcub.ac.in ಇಲ್ಲಿ ಸಂಪರ್ಕಿಸಬಹುದು.

**27.** ನಮ್ಮೆಲ್ಲರ ಹೆಮ್ಮೆಯ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣವನ್ನು ಸ್ವಚ್ಛವಾಗಿಡಲು ಸಹಕರಿಸೋಣ.

**ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಡಿಯಲ್ಲಿ ಜರುಗುವ ಕೋರ್ಸುಗಳು ಮತ್ತು ಕೇಂದ್ರಗಳ ಮಾಹಿತಿ:**

| ಕ್ರ.ಸಂ | ಕೋರ್ಸಗಳು | ಕೋರ್ಸ ಕೇಂದ್ರಗಳು |
|---|---|---|
| 1 | ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಸಮಾಜಕಾರ್ಯ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಶಿಕ್ಷಣಶಾಸ್ತ್ರ ಹಾಗೂ ಎಮ್.ಬಿ.ಎ. | ಮುಖ್ಯ ಆವರಣ, ವಿದ್ಯಾಸಂಗಮ, ಭೂತರಾಮನಹಟ್ಟಿ |
| 2 | ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ ಸಸ್ಯಶಾಸ್ತ್ರ ಭೂಗೋಳಶಾಸ್ತ್ರ ಗಣಕವಿಜ್ಞಾನ, ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಹಾಗೂ ಎಮ್.ಸಿ.ಎ. | ನೂತನ ಆವರಣ, ವಿಜ್ಞಾನ ಸಂಗಮ ಹೀರೆಬಾಗೇವಾಡಿ |
| 3 | ಕನ್ನಡ ಹಾಗೂ ಇಂಗ್ಲೀಷ. | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ |
| 4 | ಮರಾಠಿ (ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕೋಟಾದಡಿಯಲ್ಲಿ) | ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ, ಬೆಳಗಾವಿ |
| 5 | ಕನ್ನಡ, ಇಂಗ್ಲೀಷ, ಮರಾಠಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಸಮಾಜಕಾರ್ಯ, ವಾಣಿಜ್ಯಶಾಸ್ತ್ರ ಗಣಿತಶಾಸ್ತ್ರ ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಎಮ್.ಸಿ.ಎ ಹಾಗೂ ಉರ್ದು. | ಸ್ನಾತಕೋತ್ತರ ಕೇಂದ್ರ, ವಚನ ಸಂಗಮ, ತೊರವಿ, ವಿಜಯಪುರ |
| 6 | ಮದ್ಯಸಾರ ತಂತ್ರಜ್ಞಾನ ಮತ್ತು ಸಕ್ಕರೆ ತಂತ್ರಜ್ಞಾನ | ಶ್ರೀ. ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಮಹಾವಿದ್ಯಾಲಯ, ಬೆಳಗಾವಿ |
| 7 | ಎಂ.ಪಿ.ಇಡಿ - (M.P.Ed) ದೈಹಿಕ ಶಿಕ್ಷಣಶಾಸ್ತ್ರ | 1. ಎಮ್.ಇ.ಎಸ್ ಎಂ.ಪಿ.ಇಡಿ ಕಾಲೇಜು, ಮೂಡಲಗಿ<br>2. ಎಸ್.ಪಿ.ಎಮ್ ಎಂ.ಪಿ.ಇಡಿ ಕಾಲೇಜು, ರಾಯಬಾಗ. |

**ಸಹಿ/-**

**ಉಪ ಕುಲಸಚಿವರು**

**ಇವರಿಗೆ,**

- 2026-27ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಕೋರ್ಸಗಳ ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ,

**ಪ್ರತಿ ಮಾಹಿತಿಗಾಗಿ:**

- ಕುಲಸಚಿವರು (ಮೌಲ್ಯಮಾಪನ), ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಹಣಕಾಸು ಅಧಿಕಾರಿಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಡೀನರು, ಎಲ್ಲ ನಿಕಾಯಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ನಿರ್ದೇಶಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಮುಖ್ಯಸ್ಥರು/ಸಂಯೋಜಕರು, ಸ್ನಾತಕೋತ್ತರ ವಿಭಾಗಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಸಂಯೋಜಕರು, ಸ್ನಾತಕೋತ್ತರ ಕೇಂದ್ರ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿಜಯಪುರ.
- ಅಧೀಕ್ಷಕರು/ಸಹಾಯಕ ಕುಲಸಚಿವರು/ಉಪಕುಲಸಚಿವರು/ ಕಿರಾಚವಿ, ಬೆಳಗಾವಿ.
- ಮುಖ್ಯಸ್ಥರು/ಸಂಯೋಜಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕ, ಕಿರಾಚವಿ, ಬೆಳಗಾವಿ.
- ಪ್ರಾಚಾರ್ಯರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ.
- ಪ್ರಾಚಾರ್ಯರು, ಸ್ನಾತಕೋತ್ತರ ಮಹಾವಿದ್ಯಾಲಯಗಳು, ಬೆಳಗಾವಿ ಮತ್ತು ವಿಜಯಪುರ ಜಿಲ್ಲೆ
- ಮುಖ್ಯಸ್ಥರು/ಸಂಯೋಜಕರು, ವಸತಿ ನಿಲಯಗಳು, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಮುಖ್ಯಸ್ಥರು/ಸಂಯೋಜಕರು/ನೊಡೆಲ್ ಅಧಿಕಾರಿಗಳು, ಕಿರಾಚವಿಯ ಇಲಾಖೆಗಳು/ಘಟಕಗಳು/ಕೋಶಗಳು.
- ಮುಖ್ಯಸ್ಥರು/ಸಂಯೋಜಕರು, ಐ.ಟಿ ಕೋಶ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಮುಖ್ಯಸ್ಥರು/ಸಂಯೋಜಕರು, ಇ-ವಿದ್ಯಾ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ನೋಡಲ್ ಅಧಿಕಾರಿಗಳು, UUCMS ಆಡಳಿತ ವಿಭಾಗ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಸಚಿವಾಲಯ, ಕಿರಾಚವಿ, ಬೆಳಗಾವಿ.
- ಮಾನ್ಯ ಕುಲಸಚಿವರ ಕಾರ್ಯಾಲಯ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.
- ರಕ್ಷಾ ಪ್ರತಿ.